ಕ್ರಿಃಮಿಸ್ಃನಂ.366/2021

ಪಿ.ಡಬ್ಲ್ಯೂ-1

**ದಿಃ 31-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ಎದುರುದಾರರ ಪರ ಶ್ರೀ ಜೆ ಟಿ ಜೆ **ವಕೀಲರಿಂದ.**

ನನ್ನ ಚಿಕ್ಕಮ್ಮನ ಹೆಸರು ಅಖಿಲ ಎಂದರೆ ಸರಿ. ಮನೆಯ ಇನೋವೇಷನ್ ಮಾಡಿಸಲು ನಿಮ್ಮ ಗಂಡನಿಂದ 1 ಲಕ್ಷ ಹಣವನ್ನು ನಿಮ್ಮ ಚಿಕ್ಕಮ್ಮ ಅಖಿಲರವರಿಗೆ ಕೊಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಎದುರುದಾರರು ಅಖಿಲರವರಿಗೆ ನೇಪ್ಟ ಮುಖಾಂತರ ಒಂದು ಲಕ್ಷ ಹಣವನ್ನು ವರ್ಗಾವಣೆ ಮಾಡಿರುತ್ತಾರೆಂದರೆ ಸಾಕ್ಷಿ ಅವರು ಯಾವುದೇ ವ್ಯವಹಾರ ನನಗೆ ತಿಳಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಹೇಳಿಕೆಯ ಮೇರೆಗೆ ಎದುರುದಾರರು ಹಣವನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಐಶ್ವರ್ಯ ಎಂಬ ವ್ಯಕ್ತಿ ನನಗೆ ತಿಳಿದಿರುವುದಿಲ್ಲ. ನೀವು ಎದುರುದಾರರ ಜೊತೆ ಹಲವಾರು ಸ್ಥಳಗಳಿಗೆ ಪ್ರವಾಸಕ್ಕೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಮದುವೆಯಾದ ಹೊಸದರಲ್ಲಿ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ಕಡೂರಿನ ರಂಜಿನಿಯು ನನ್ನ ಅಣ್ಣನನ್ನು ಮದುವೆ ಆಗಿದ್ದರು ಎಂದರೆ ಸರಿ. ಅವರೊಂದಿಗೆ ಎದುರುದಾರರು ಅಕ್ರಮ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ನಾನು ನನ್ನ ಅರ್ಜಿಯಲ್ಲಿ ತಿಳಿಸಿರುತ್ತೇನೆ.

ನಿಮ್ಮ ಅಣ್ಣ ಅತ್ತಿಗೆ ಸಂಸಾರದಲ್ಲಿ ಗಲಾಟೆ ಆಗಿದ್ದು, ಅವರನ್ನು ಸರಿ ಮಾಡುವ ವಿಚಾರದಲ್ಲಿ ಎದುರುದಾರರನ್ನು ನಿಮ್ಮ ಅತ್ತಿಗೆಗೆ ಪರಿಚಯ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಎದುರುದಾರರು ರಂಜಿನಿರವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಿಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದು, ಮುಂದುವರಿದು ಅವರು ತಮ್ಮ ಮೊಬೈಲ್ ನಿಂದ ರಾತ್ರಿಯೆಲ್ಲಾ ಮಾತನಾಡುತ್ತಿರುವ ಬಗ್ಗೆ ನಾನು ನೋಡಿರುತ್ತೇನೆಂದು ನುಡಿದಿರುತ್ತಾರೆ. ಅದರ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ. ನೀವು ರಂಜಿಯವರೊಂದಿಗೆ ಎದುರುದಾರರ ಜೊತೆ ಯಾವುದೇ ಸಂಬಂಧ ಇಲ್ಲದ್ದರೂ ಸುಳ್ಳು ಸಂಬಂಧ ಕಲ್ಪಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ನಿಮ್ಮ ಅತ್ತಿಗೆಯಾದ ರಂಜಿನಿ ನಿಮ್ಮಹಾಗೂ ನಿಮ್ಮ ಕುಟುಂಬದ ವಿರುದ್ಧ ವರದಕ್ಷಿಣೆ ಕಿರುಕುಳದ ಬಗ್ಗೆ ಕೇಸ್ ಹಾಕಿರುತ್ತಾರೆಂದರೆ ಸರಿ. ಅದರ ಸಲುವಾಗಿ ನೀವು ಎದುರುದಾರರ ಜೊತೆ ಅವರಿಗೆ ತಿಳಿಯದಂತೆ ನಿಮ್ಮ ತವರು ಮನೆಗೆ ಓಡಾಡಿ ಎದುರುದಾರರ ಜೊತೆ ಜಗಳ ಮಾಡಿಕೊಂಡು ಅವರನ್ನು ದೂರ ಮಾಡಿಕೊಂಡಿರುತ್ತಿರಾ ಎಂದರೆ ಸರಿಯಲ್ಲ. ಆದ್ದರಿಂದ ಎದುರುದಾರರಿಗೂ ಮತ್ತು ರಂಜಿನಿಗೂ ಇಲ್ಲದ ಸಂಬಂಧ ಕಲ್ಲಿಸಿ ಅವರ ಮೇಲೆ ದ್ವೇಷ ತೀರಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ನಮ್ಮ ತಂದೆ ಅಂಚೆ ಕಛೇರಿಯಲ್ಲಿ ಆಫೀಸರ್ ಆಗಿ ಕೆಲಸ ಮಾಡುತ್ತಾರೆ. ಅವರಿಗೆ ಒಂದು ಲಕ್ಷ ಸಂಬಳ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನಿಮ್ಮ ಅರ್ಜಿಯಲ್ಲಿ ನಿಮ್ಮ ತಂದೆ ತಾಯಿ ಬಡತನದಲ್ಲಿರುತ್ತಾರೆಂದು ಸುಳ್ಳು ವಿಚಾರ ತಿಳಿಸಿರುತ್ತಿರಾ ಎಂದರೆ ಸರಿಯಲ್ಲ. ನಿಮ್ಮ ಅಜ್ಜಿಗೆ ಕ್ಯಾನ್ಸರ್ ಕಾಯಿಲೆ ಇದ್ದಾಗ ಎದುರುದಾರರೇ ಅವರನ್ನು ಎಲ್ಲಾ ಕಡೆ ತೋರಿಸಿ ಚಿಕಿತ್ಸೆ ಕೊಡಿಸಿರುತ್ತಾರೆಂದರೆ ಸಾಕ್ಷಿ ಕೇವಲ ವೈದ್ಯರನ್ನು ತೋರಿಸಿರುತ್ತಾರೆಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಎದುರುದಾರರು ನಿಮ್ಮ ಅಜ್ಜಿಯ ಚಿಕಿತ್ಸೆಗಾಗಿ 50 ಸಾವಿರ ಖರ್ಚು ಮಾಡಿರುತ್ತಾರೆ, ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಮೊದಲನೇಯ ಮಗುವಿನ ಮೊದಲನೇ ವರ್ಷದ ಜನ್ಮ ದಿನವನ್ನು ದಿನಾಂಕಃ 21-09-2024 ರಂದು ಬೆಂಗಳೂರಿನಲ್ಲಿ ಆಚರಿಸಿದ್ದು, ಆ ಸಮಯದಲ್ಲಿ ನಿಮ್ಮ ತಾಯಿ ಮನೆಯವರೆಲ್ಲಾ ಬಂದಿರುತ್ತಾರೆಂದರೆ ಸರಿ. ಆ ಸಂದರ್ಭದಲ್ಲಿ ನಿಮ್ಮ ಮೇಲೆ ತರೀಕೆರೆಯಲ್ಲಿ ಹಾಗೂ ಕಡೂರಿನಲ್ಲಿ ಕ್ರಿಮಿನಲ್ ಕೇಸ್

ದಾಖಲಾಗಿತ್ತು ಎಂದರೆ ಸಾಕ್ಷಿ ತರೀಕೆರೆಯಲ್ಲಿ ಆಗಿತ್ತು ಎಂದು ನುಡಿದಿರುತ್ತಾರೆ. ಮೇ 2025 ರಂದು ಎದುರುದಾರರು ನಿಮ್ಮನ್ನು ಹಾಗೂ ಮಕ್ಕಳನ್ನು ಕರೆದುಕೊಂಡು ಹೋಗಲು ನಿಮ್ಮ ಮನೆಗೆ ಬಂದಿರುತ್ತಾರೆಂದರೆ ಸಾಕ್ಷಿ ನನ್ನನ್ನು ಹೊಡೆಯಲು ಬಂದಿರುತ್ತಾರೆಂದು ನುಡಿದಿರುತ್ತಾರೆ. ಎದುರುದಾರರು ನಿಮ್ಮ ಮನೆಯ ಒಳಗೆ ಬರುವ ಮುಂಚೆ ನಿಮ್ಮ ತಂದೆ ಹಾಗೂ ಚಿಕ್ಕಪ್ಪ ಅವರನ್ನು ಹೊಡೆದು ರಕ್ತಗಾಯ ಮಾಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದು ಎದುರುದಾರರು ನಮ್ಮ ಮನೆಯ ಒಳಗೆ ಬಂದು ನನಗೆ ಹೊಡೆದು ಮಗುವನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿದಾಗ ತಡೆದರು ಎಂದು ನುಡಿದಿರುತ್ತಾರೆ. ನಿಮ್ಮ ಕುಟುಂಬದವರು ಎದುರುದಾರರು ಮತ್ತು ಅವರ ತಮ್ಮನನ್ನು ಹೊಡೆದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ, ಎದುರುದಾರರು ಮತ್ತು ಅವರ ತಮ್ಮ ನಿಮ್ಮ ಹಾಗೂ ನಿಮ್ಮ  ಕುಟುಂಬದ ಮೇಲೆ ದೂರು ನೀಡಿರುತ್ತಾರೆಂದರೆ ಸಾಕ್ಷಿ ನಾವು ಸಹ ನೀಡಿರುತ್ತೇವೆ ಎಂದು ನುಡಿದಿರುತ್ತಾರೆ.

ನೀವು ಎದುರುದಾರರ ಜೊತೆ ಜೀವನ ಮಾಡುತ್ತಿದ್ದಾಗ ನಿಮ್ಮ ಖರ್ಚಿಗೆ ನಿಮ್ಮ ತಂದೆ ತಾಯಿ ಹಣವನ್ನು ನೀಡುತ್ತಿದ್ದಾರ ಎಂದರೆ ಸಾಕ್ಷಿ ಹೌದು 2-3 ಸಾವಿರ ನೀಡುತ್ತಿದ್ದರು ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಎದುರುದಾರರು ನಿಮ್ಮ ಬಳಿ ಇದ್ದ ಹಣವನ್ನು ಕಿತ್ತುಕೊಳ್ಳುತ್ತಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ನೀಡಿದ ಹಣವನ್ನು ಎದುರುದಾರರ ಹಣ ನಾನು ಕದ್ದಿರುತ್ತೇನೆ ಎಂದು ಎದುರುದಾರರು ನನ್ನ ಬ್ಯಾಗ್ ಹಾಗೂ ಬಟ್ಟೆಗಳನ್ನು ಹುಡುಕುತ್ತಿದ್ದರು  ಹಾಗಾಗಿ ನಾನು ಹಾಗೆ ಹೇಳಿರುತ್ತೇನೆಂದು ನುಡಿದಿರುತ್ತಾರೆ. ನೀವು ಎದುರುದಾರರ ಸಂಸಾರ ಮಾಡುತ್ತಿದ್ದಾಗ ಅವರೇ ಮನೆ ಖರ್ಚನ್ನು ನೋಡಿಕೊಂಡು ರೇಷನ್ ತಂದು ಹಾಕುತ್ತಿದ್ದರು ಎಂದರೆ ಸರಿ.  ಸಾಕ್ಷಿಯು ನನಗೂ ಹಾಗೂ

ಮಕ್ಕಳಿಗೆ ಹುಷಾರಿಲ್ಲದ ಸಮಯದಲ್ಲಿ ಸರಿಯಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಎದುರುದಾರರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಸಹ ಅವರ ಮೇಲೆ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಎದುರುದಾರರು ಈಗಲೂ ಸಹ ನಿಮ್ಮನ್ನು ಕರೆದುಕೊಂಡು ಹೋಗಲು ತಯಾರಿರುತ್ತಾರೆಂದರೆ ಸಾಕ್ಷಿ ನನಗೆ ಹೋಗಲು ಇಷ್ಟವಿರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ** ಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.